ಕರ್ನಾಟಕ ವಿಧಾನಸಭೆ

ಸೋಮವಾರ, ದಿನಾಂಕ: 11ನೇ ಅಕ್ಟೋಬರ್, 2010ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯರವರು

ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

(ಮಾನ್ಯ ವಿರೋಧ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿದ್ದರು)

(ಗೊಂದಲ)

(ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಿದ್ದರು)

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸದನದ ಬಾವಿಯಲ್ಲಿರುವ ಸದಸ್ಯರುಗಳೆಲ್ಲರೂ ತಮ್ಮ ತಮ್ಮ ಆಸನಗಳಿಗೆ ಹಿಂದಿರುಗಿ ಕಲಾಪ ನಡೆಸಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ.

(ಗೊಂದಲ)

1. ಪ್ರಕಟಣೆ:

ಅಧ್ಯಕ್ಷರು : ಕರ್ನಾಟಕ ವಿಧಾನ ಸಭೆಯ ಸದಸ್ಯರುಗಳ ಅನರ್ಹತೆಯ ನಿಯಮಗಳು 1986ರ ಮೇರೆಗೆ ವಿಧಾನ ಸಭೆಯ ಈ ಕೆಳಕಾಣಿಸಿದ ಸದಸ್ಯರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನರ್ಹಗೊಳಿಸಲಾಗಿದೆ ಎಂದು ಸದನದ ಗಮನಕ್ಕೆ ತರುತ್ತಿದ್ದೇನೆ.

(ಗೊಂದಲ)

ಕ್ರಮ ಸಂಖ್ಯೆ	ಹೆಸರು	ಕ್ಷೇತ್ರ
1	ಗೋಪಾಲಕೃಷ್ಣ ಬೇಳೂರು	ಸಾಗರ
2	ಆನಂದ ವಸಂತ ಅಸ್ನೋಟಿಕರ್	ಕಾರವಾರ
3	ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ	ಅರಭಾವಿ
4	ಡಾ: ಬಗಲಿ ಸಾರ್ವಭೌಮ ಸಾತಗೌಡ	ಇಂಡಿ
5	ಭರಮಗೌಡ ಅಲಗೌಡ ಕಾಗೆ	ಕಾಗವಾಡ
6	ವೈ. ಸಂಪಂಗಿ	ಕೆ.ಜಿ.ಎಫ್.
7	ಜಿ.ಎನ್. ನಂಜುಂಡಸ್ವಾಮಿ	ಕೊಳ್ಳೇಗಾಲ
8	ಎಂ.ವಿ. ನಾಗರಾಜು	ನೆಲಮಂಗಲ
9	ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ	ಬಸವನ ಬಾಗೇವಾಡಿ
10	ಕೆ. ಶಿವನಗೌಡ ನಾಯಕ್	ದೇವದುರ್ಗ
11	ಹೆಚ್.ಎಸ್. ಶಂಕರಲಿಂಗೇಗೌಡ	ಚಾಮರಾಜ
12	ಶಿವರಾಜ್ ತಂಗಡಗಿ	ಕನಕಗಿರಿ
13	ಡಿ. ಸುಧಾಕರ್	ಹಿರಿಯೂರು
14	ಗೂಳಿಹಟ್ಟಿ ಡಿ. ಶೇಖರ್	ಹೊಸದುರ್ಗ
15	ವೆಂಕಟರಮಣಪ್ಪ	ಪಾವಗಡ
16	ಪಿ.ಎಂ. ನರೇಂದ್ರಸ್ವಾಮಿ	ಮಳವಳ್ಳಿ

(ಗೊಂದಲ)

ಅಧ್ಯಕ್ಷರು : ಅನರ್ಹಗೊಳಿಸಲ್ಪಟ್ಟ 16 ಸದಸ್ಯರು ಸದನದಲ್ಲಿ ಹಾಜರಿದ್ದಲ್ಲಿ ಅವರುಗಳು ಸದನದಿಂದ ನಿರ್ಗಮಿಸಬೇಕೆಂದು ಆದೇಶಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಅನರ್ಹಗೊಂಡಿರುವ ಸದಸ್ಯರು ದಯವಿಟ್ಟು ಸದನದಿಂದ ನಿರ್ಗಮಿಸಬೇಕು.

(ಗೊಂದಲ)

ಅಧ್ಯಕ್ಷರು : ಅನರ್ಹಗೊಂಡ ಸದಸ್ಯರು ಸದನದಲ್ಲಿ ಇದ್ದಲ್ಲಿ ಸದನದಿಂದ ನಿರ್ಗಮಿಸಬೇಕೆಂದು ಅಂತಿಮವಾಗಿ ಮತ್ತೊಮ್ಮೆ ಆದೇಶಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾವವನ್ನು ಮಂಡಿಸುವುದು.

(ಗೊಂದಲ)

2. ವಿಶ್ವಾಸಮತ ಪ್ರಸ್ತಾಪ :

ವಿಷಯ : ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ರವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುವ ಬಗ್ಗೆ.

(ವಿರೋಧ ಪಕ್ಷದ ಸದಸ್ಯರುಗಳಿಂದ ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

"ಈ ಸದನವು ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ".

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,